# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಜಮಖಂಡಿ.

ಸಿ.ಸಿ.ನಂ.**255/2025**

| ಫಿರ್ಯಾದುದಾರರು | ವಿರುದ್ಧ | ಆರೋಪಿ |
| --- | --- | --- |
| ಜಗನಾಥ ತಂದೆ ಅಶೋಕ ತರತರಿ | | ಪ್ರಮಿಳಾ ಗಂಡ ಹರೀಶ್ ಡಾಲಿ @ ಮಳಗಿ |

| | |
| --- | --- |
| ಆರೋಪಿಯ ಹೆಸರು | ಪ್ರಮಿಳಾ ಡಾಲಿ @ ಮಳಗಿ |
| ಗಂಡನ ಹೆಸರು | ಹರೀಶ್ |
| ವಯಸ್ಸು | 55 ವರ್ಷ |
| ಉದ್ಯೋಗ | ಶಿಕ್ಷಕಿ |
| ವಾಸಸ್ಥಳ | ರಾಮೇಶ್ವರ ಕಾಲೋನಿ, ಜಮಖಂಡಿ |

## ದಂಡ ಪ್ರಕ್ರಿಯಾ ಸಂಹಿತೆ ಕಲಂ.**313** ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ 1: ನೀವು ಫಿರ್ಯಾದುದಾರರ ಪರವಾಗಿ ನೀಡಿರುವ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ ?

ಉತ್ತರಃ- ಕೇಳಿರುತ್ತೇನೆ.

ಪ್ರಶ್ನೆ 2: ಪ್ರಾಸಾ-1) ಜಗನಾಥ ತಂದೆ ಅಶೋಕ ತರತರಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ದಿನಾಂಕ 24.09.2022 ರಂದು ಆರೋಪಿಯಾದ ನೀವು ನಿಮ್ಮ ಕುಟುಂಬದ ಅವಶ್ಯಕತೆಗಳಿಗಾಗಿ ಫಿರ್ಯಾದಿದಾರರಿಂದ ರೂ.2,65,000/- ಹಣ ಕೈಸಾಲವಾಗಿ ಪಡೆದಿರುತ್ತೀರಿ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ- ಸುಳ್ಳು.

ಪ್ರಶ್ನೆ 3: ಪ್ರಾಸಾ-1) ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ಆರೋಪಿಯಾದ ನೀವು ಸದರಿ ಮೊತ್ತದ ಹಣದ ಮರುಪಾವತಿಗಾಗಿ ದಿನಾಂಕ 25.03.2023 ರಂದು ನಿಮ್ಮ ಖಾತೆ ಇರುವ ಎಸ್.ಬಿ.ಐ ಬ್ಯಾಂಕ್, ಶಾಖೆ ಜಮಖಂಡಿ ಚೆಕ್ಕ್ ನಂ.836197 ನ್ನು ರೂ.2,65,000/- ಮೊತ್ತಕ್ಕೆ ಕೊಟ್ಟಿರುತ್ತೀರಾ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ- ಸುಳ್ಳು.

ಪ್ರಶ್ನೆ 4: ಪ್ರಾಸಾ-1) ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ನೀವು ನೀಡಿರುವ ಚೆಕ್ಕನ್ನು ದಿನಾಂಕ 17.04.2023 ರಂದು ತನ್ನ ಖಾತೆ ಇರುವ ಎಸ್.ಬಿ.ಐ, ಶಾಖೆ ಜಮಖಂಡಿ ಬ್ಯಾಂಕಿನಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ, ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ

"FUNDS INSUFFICIENT" ಎಂಬ ಹಿಂಬರಹದೊಂದಿಗೆ ಹಣವನ್ನು ನೀಡದೇ ಸದರಿ ಚೆಕ್ಕನ್ನು ಮರಳಿ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ- ಸುಳ್ಳು.

ಪ್ರಶ್ನೆ 5: ಪ್ರಾಸಾ-1) ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ನಂತರ ದಿನಾಂಕ 29.04.2023 ರಂದು ಚೆಕ್‌ನಲ್ಲಿ ಹೇಳಿರುವಂತಹ ಹಣವನ್ನು ಪಾವತಿ ಮಾಡಲು ತಮ್ಮ ವಕೀಲರ ಮುಖಾಂತರ ನಿಮಗೆ ತಿಳುವಳಿಕೆ ಪತ್ರ (ಲೀಗಲ್ ನೋಟೀಸ್) ನೀಡಿರುತ್ತಾರೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ- ನೋಟಿಸು ನನಗೆ ಮುಟ್ಟಿರುತ್ತದೆ.

ಪ್ರಶ್ನೆ 6: ಪ್ರಾಸಾ-1) ಇವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ತಾನು ನೀಡಿದ ತಿಳುವಳಿಕೆ ಪತ್ರ (ಲೀಗಲ್ ನೋಟೀಸ್) ನಿಮಗೆ ದಿನಾಂಕ 01.05.2023 ರಂದು ಜಾರಿಯಾಗಿದ್ದು, ತಿಳುವಳಿಕೆ ಪತ್ರ (ಲೀಗಲ್ ನೋಟೀಸ್) ಜಾರಿಯಾದ 15 ದಿನಗಳ ನಂತರವೂ ನೀವು ಹಣವನ್ನು ಪಾವತಿ ಮಾಡಿರುವುದಿಲ್ಲ ಎಂದು ಮತ್ತು ಅವರು ತಮ್ಮ ಹೇಳಿಕೆಯ ಮೂಲಕ ನಿಶಾನೆ ಪಿ.1 ರಿಂದ ನಿಶಾನೆ ಪಿ.6 ರ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ಹೇಳುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ- ಸುಳ್ಳು ಇರುತ್ತದೆ.

ಪ್ರಶ್ನೆ 7: ನಿಮ್ಮ ಪರವಾಗಿ ಸ್ವಇಚ್ಛೆಯಿಂದ ಬೇರೆ ಏನನ್ನಾದರೂ ಹೇಳುವುದು ಇದೆಯೇ ?

ಉತ್ತರಃ- ನಾನು ಯಾವುದೇ ಬಾಕಿ ಹಣ ನೀಡುವುದು ಇರುವುದಿಲ್ಲ.

ಪ್ರಶ್ನೆ 8: ನಿಮ್ಮ ಪರವಾಗಿ ಯಾವುದಾದರೂ ಮೌಖಿಕ ಅಥವಾ ದಾಖಲೆ ಸಾಕ್ಷ್ಯವನ್ನು ಹಾಜರುಪಡಿಸುವಿರಾ ?

ಉತ್ತರಃ- ಸಾಕ್ಷಿ ಮಾಡಿಸುತ್ತೇನೆ.

(ಈ ಮೇಲ್ಕಂಡ ಪ್ರಶ್ನೆಗಳನ್ನು ಆರೋಪಿಗೆ ಓದಿ ಹೇಳಿ ಅರ್ಥೈಸಿದ ನಂತರ, ಆರೋಪಿಯು ನೀಡಿದ ಉತ್ತರಗಳನ್ನು ಇಂದು ದಿನಾಂಕ 04.10.2025 ರಂದು ಈ ಮೇಲಿನಂತೆ ನಮೂದಿಸಿಕೊಳ್ಳಲಾಯಿತು)

ಓ.ಹೇ.ಕೇ. ಸರಿ ಇದೆ.

RAJASHEKHAR

Digitally signed by RAJASHEKHAR
Date: 2025.10.04 16:15:36 +0530

ಸ್ಥಳಃ- ಜಮಖಂಡಿ.
ದಿನಾಂಕಃ- 04.10.2025

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.